
# ‘ವಿಶ್ವರೂಪ ದರ್ಶನ’ ಮತ್ತು ‘ಜೀವನಧರ್ಮದರ್ಶಿನಿ’

ಶತಾಯುಷಿ ಶ್ರೀಮತಿ ಸಿ.ಎಸ್.ಮಂಗಳಮ್ಮನವರ **‘ವಿಶ್ವರೂಪ ದರ್ಶನ’** ಎಂಬ ಪುಸ್ತಕವು ವಿವಿಧ ವಿಷಯಗಳನ್ನೊಳಗೊಂಡ ಹದಿನೈದು ಲೇಖನಗಳ ಸಂಕಲನವಾಗಿದೆ. ಪುಸ್ತಕದ ಶೀರ್ಷಿಕೆಯನ್ನೇ ಹೊಂದಿರುವ ‘ವಿಶ್ವರೂಪದರ್ಶನ’ ಎಂಬ ಲೇಖನ ಮೊದಲನೆಯದು. ಹೆಸರೇ ಸೂಚಿಸುವಂತೆ, ಈ ಲೇಖನವು ಗೀತೆಯ ವಿಶ್ವರೂಪ ದರ್ಶನವನ್ನು ಕುರಿತಾಗಿದೆ. ಆದರೆ ಇದು ಗೀತೆಯ ವಿಶ್ವ ರೂಪ ದರ್ಶನವೆಂಬ ಅಧ್ಯಾಯದ ವಿವರಣೆ ಎಂದು ಭಾವಿಸಿದರೆ ತಪ್ಪಾದೀತು. ಗೀತೆಯಲ್ಲಿ ಬರುವ ಅಭೂತಪೂರ್ವ ವಿಶ್ವರೂಪದ ವಿಚಾರದೊಂದಿಗೆ ಇನ್ನಿತರ ಅಲೌಕಿಕ ಸಂಗತಿಗಳನ್ನೂ ವಿವೇಚಿಸಿ, ಒಂದು ಆಧ್ಯಾತ್ಮಿಕ ಅರ್ಥವನ್ನು ಕಂಡುಕೊಳ್ಳಲು ಯತ್ನಿಸಿದ್ದಾರೆ, ಲೇಖಕಿ. ಇದಲ್ಲದೆ, ‘ರಾಮಾಯಣದಲ್ಲಿ ಬಾಣದ ಪ್ರಾಧಾನ್ಯತೆ’, ‘ಮಹಾಭಾರತದಲ್ಲಿ ಬಾಣದ ಪ್ರಾಧಾನ್ಯತೆ’, ‘ವಿಶ್ವವಿಜೇತ ವೀರ ಸಂನ್ಯಾಸಿಯ ಆಪತ್ಬಾಂಧವರು’, ‘ಶಕ್ತಿ’, ‘ಆಚಾರ್ಯ ಶಂಕರರ ಜೀವನ ಮತ್ತು ಸಾಧನೆ’, ‘ಭಿನ್ನತೆಯಲ್ಲಿ ಏಕತೆ’, ‘ಹಳ್ಳಿ ಹಣತೆಯ ವಿಶೇಷತೆ? ವಿಶ್ವವಂದಿತೆ’, ‘ಜಗದ್ವಂದ್ಯೆ ಶ್ರೀಮಾತೆ ಶಾರದಾದೇವಿ’, ‘ಅವತಾರ ವೈಶಿಷ್ಟ್ಯ’ – ಇವೇ ಮೊದಲಾದ ಲೇಖನಗಳು ಇಲ್ಲಿ ಸೇರಿವೆ. ಪೌರಾಣಿಕ ಹಾಗೂ ರಾಮಕೃಷ್ಣ ಪರಂಪರೆಯ ವಿಷಯಗಳೇ ಇಲ್ಲಿ ಅಧಿಕವಾಗಿವೆ. ಆಧ್ಯಾತ್ಮಿಕ ಹಿನ್ನೆಲೆಯ ಲೇಖಕಿ, ತಮ್ಮ ಜೀವನದುದ್ದಕ್ಕೂ ಬೆಳೆಸಿಕೊಂಡು ಬಂದ ಚಿಂತನೆಗಳ ಸರಳ ಅಭಿವ್ಯಕ್ತಿ ಇಲ್ಲಿದೆ. ✷




**ಕೃತಿ:** ವಿಶ್ವರೂಪ ದರ್ಶನ
**ಲೇಖಕರು :** ಸಿ.ಎಸ್.ಮಂಗಳಮ್ಮ
**ಪ್ರಕಾಶನ :** ಸಂವಹನ, ನಂ. 12/1, ಈವನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ಮೈಸೂರು – 570 001
ಮೊ. 8618131761
**ಬೆಲೆ:** 200/– **ಪುಟ:** 184




**ಕೃತಿ:** ಜೀವನಧರ್ಮದರ್ಶಿನಿ
**ಲೇಖಕರು :** ಸಿ.ಎಸ್.ಮಂಗಳಮ್ಮ
**ಪ್ರಕಾಶನ :** ಸಂವಹನ, ನಂ. 12/1, ಈವನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ಮೈಸೂರು – 570 001
ಮೊ. 8618131761
**ಬೆಲೆ:** 200/– **ಪುಟ:** 190

ಸಿ. ಎಸ್. ಮಂಗಳಮ್ಮನವರ ಮತ್ತೊಂದು ಕೃತಿಯೇ **‘ಜೀವನ ಧರ್ಮದರ್ಶಿನಿ.’** ಇದು ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳಲ್ಲಿ ಕಂಡುಬರುವ ಹತ್ತು ಹಲವು ಹೊಳಹುಗಳ ಸರಳ ವ್ಯಾಖ್ಯಾನವೆನ್ನಬಹುದು. ಗೀತೆಯನ್ನು ಕುರಿತ ಅಸಂಖ್ಯಾತ ಕೃತಿಗಳು ಹೊರಬಂದಿವೆ; ಆದರೂ ಪ್ರತಿಯೊಬ್ಬ ಓದುಗನ ಅನುಭವವೂ ಒಂದೊಂದು ಬಗೆಯ ಕಾಣ್ಕೆ. ಇದಕ್ಕನುಸಾರವಾಗಿ, ಎಷ್ಟು ಬಗೆಯ ಬರಹಗಳು ಹೊರಬಂದರೂ, ಲೇಖಕರಿಗೆ ಕೊನೆಯಿಲ್ಲ, ಕೃತಿಗಳಿಗೂ ಕೊನೆಯಿಲ್ಲ. ಈ ಗ್ರಂಥವೂ ಒಂದು ಹೊಸ ಆಶಯವನ್ನು ಹೊತ್ತು ರಚಿತವಾದ ಕೃತಿ.

‘ಪ್ರೇರಣೆ’ ಎಂಬ ಹೆಸರಿನ ಮುನ್ನುಡಿಯಲ್ಲಿ ಲೇಖಕಿ ತಿಳಿಸಿರುವಂತೆ, ಕೋವಿಡ್ ಸಂದರ್ಭದಲ್ಲಿ ಟಿ.ವಿ. ವಾಹಿನಿಯೊಂದರಲ್ಲಿ ಬಿತ್ತರವಾಗುತ್ತಿದ್ದ ಗೀತಾಪ್ರವಚನವೊಂದರಲ್ಲಿ, ಆರು ಬಗೆಯ ಶಂಖಗಳ ವಿಶೇಷತೆಯೇನು ಎಂಬ ವಿಷಯವನ್ನು ಚರ್ಚಿಸಲಾಗುತ್ತಿತ್ತು. ಈ ಬಗೆಯ ಹೊಸ ವಿಚಾರಗಳಲ್ಲಿ ಕುತೂಹಲ ಮೂಡಿ, ಮುಂದೆ ಅದನ್ನು ಕುರಿತು ಟಿಪ್ಪಣಿಗಳನ್ನು ಬರೆದಿಡುವ, ಲೇಖನಗಳನ್ನು ರಚಿಸುವ ಕಾರ್ಯ ಮೈಗೂಡಿಬಂತು. ಈ ರೀತಿ ರಚನೆಗೊಂಡ ಕೃತಿಯೇ ‘ಜೀವನಧರ್ಮದರ್ಶಿನಿ’ ಎಂಬ ಕೃತಿಯಾಗಿ ರೂಪ ತಳೆಯಿತು. ಹದಿನೆಂಟು ಅಧ್ಯಾಯಗಳಿಗೂ ವಿನೂತನ ವಿವರಣೆ ನೀಡಿರುವಂತೆ, ಅರ್ಥಪೂರ್ಣ ಶೀರ್ಷಿಕೆಗಳನ್ನೂ ನೀಡಿದ್ದಾರೆ. ಓದುಗರ ಕುತೂಹಲವನ್ನು ಕೆರಳಿಸುವಂತೆ ಈ ಹೆಸರುಗಳು ತುಂಬ ರೋಚಕವಾಗಿವೆ. ಕೃತಿಯುದ್ದಕ್ಕೂ ಹತ್ತುಹಲವು ಕಥೆಗಳು, ಚಿಂತನೆಗಳು ವಿಷಯಗಳಿಗೆ ಪೂರಕವಾಗಿ ಬಂದಿವೆ. ಇವು ಕೃತಿಗೆ ಸಮಗ್ರತೆಯನ್ನು ತಂದಿವೆ. ✷